# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ನವಲಗುಂದ.

| | |
|---|---|
| ಸಿ.ಸಿ. ನಂಬರ್ | : 47/2024 |
| ಸಿ.ಡಬ್ಲೂ | : 03 |
| ಪಿ.ಡಬ್ಲೂ | : 05 |
| ಸಾಕ್ಷಿಯ ಹೆಸರು | : ಶಂಕ್ರಪ್ಪ ದೇವಪ್ಪ ಕುಲಕರ್ಣಿ |
| ವಯಸ್ಸು | : 72 ವರ್ಷ |
| ಉದ್ಯೋಗ | : ಒಕ್ಕಲುತನ |
| ವಾಸ ಸ್ಥಳ | : ಭೋಗಾನೂರ |

ದಿನಾಂಕಃ 21/02/2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಪ್ರಕರಣದ ಆರೋಪಿತರ ಪರಿಚಯವಿದೆ. ಚಾಸಾ-1 ಮತ್ತು 2 ರವರ ಪರಿಚಯ ಇದ್ದು, ಸದರಿಯವರ ಪೈಕಿ ಚಾಸಾ-1 ರವರು ಮೃತಪಟ್ಟಿರುತ್ತಾರೆ. ಈ ಪ್ರಕರಣದ ಕುರಿತು ನನಗೆ ಏನು ಮಾಹಿತಿ ಇರುವದಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವದೇ ಪಂಚನಾಮೆ ಮಾಡಿರುವುದಿಲ್ಲ. ಸಾಕ್ಷಿ ನೋಡಿ ಗುರುತಿಸಿದ ಪಂಚನಾಮೆಯನ್ನು ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-2(ಬಿ)** ಎಂದು ಗುರುತಿಸಲಾಯಿತು. ಸದರಿ ನಿಪಿ-2 ರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಸಹಿಯನ್ನು ಪೋಲಿಸ ಠಾಣೆಯಲ್ಲಿ ಮಾಡಿರುತ್ತೇನೆ.

(ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ –**

ದಿಃ 01-11-2020 ರಂದು ಸಂ.04-45 ರಿಂದ 05-45 ಗಂಟೆಯವರೆಗೆ ಭೋಗಾನೂರ ಗ್ರಾಮದ ಜನ್ನಪ್ಪ ಗರಗ ರವರ ಮನೆಯ ಮುಂದಿನ ರಸ್ತೆಯ ಮೇಲೆ ಚಾಸಾ-1 ಹಾಗೂ ಆರೋಪಿತರಿಗೂ ನಡೆದ ಜಗಳದ ಕುರಿತು ಚಾಸಾ-1 ರವರು ತೋರಿಸಿದ ಮೇರೆಗೆ ನನ್ನ ಹಾಗೂ ಚಾಸಾ-2 ರವರ ಸಮಕ್ಷಮ ಪಂಚನಾಮೆ ಮಾಡಿ, 1 ಕಾಡು ಕಟ್ಟಿಗೆಯನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪಂಚನಾಮೆ ಮಾಡಿದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಆರ್ ಸಿ ಜೆ ವಕೀಲರಿಂದ**

ಏನು ಇಲ್ಲಾ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**